**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ , ರಾಣೇಬೆನ್ನೂರು.**

**ಸಿ . ಸಿ. ನಂಬರಃ354/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಮುತ್ತನಗೌಡ ಗೌಡಪ್ಪಗೌಡ್ರು | ಪ್ರಾ.ಸಾ– 11 |
| ತಂದೆಯ ಹೆಸರು | – | ಈಶ್ವರ ಗೌಡ್ರು | ಚಾ.ಸಾ–15 |
| ವಯಸ್ಸು | – | 43 ವರ್ಷ | |
| ಉದ್ಯೋಗ | – | ಸಿಪಿಐ, ರಾಣೇಬೆನ್ನೂರು ಶಹರ ವೃತ್ತ | |
| ವಾಸ | – | ರಾಣೇಬೆನ್ನೂರು | |

ದಿನಾಂಕಃ12–10–2021ರಂದು ಸಾಕ್ಷಿದಾರರನ್ನು ಕರೆಯಿಸಿ Thermal Test ಮೂಲಕ ಪರೀಕ್ಷಿಸಿದಾಗ ಕೋವಿಡ್ –19 ರ ಯಾವುದೇ ಲಕ್ಷಣಗಳು ಕಂಡುಬಂದಿರುವುದಿಲ್ಲ ಆ ಕಾರಣದಿಂದ ಸಾಕ್ಷಿದಾರರನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ ಎಪಿಪಿ ಅವರಿಂದಃ**

ನಾನು ಜುಲೈ 2011 ರಿಂದ ಸೆಪ್ಟೆಂಬರ್ 2013 ರವರಗೆ ರಾಣೆಬೆನ್ನೂರ ಶಹರ ಲಿಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕಾರ್ಯನಿರ್ವಹಿಸಿರುತ್ತೇನೆ .

ದಿಃ 30–07–2012 ರಂದುದ ನಾನು ಮಧ್ಯಾಹ್ನ 2.30 ಕ್ಕೆ ಠಾಣಾ ಕರ್ತವ್ಯದಲ್ಲಿದ್ದಾಗ ಈ ಕೆಸಿನ ಪಿರ್ಯಾದುದಾರರು ಸತೀಶ್ ಎಂಬುವವರು ಠಾಣೆಗೆ ಹಾಜರಾಗಿ ದೂರನ್ನು ಕೊಟ್ಟಿರುತ್ತಾರೆ . ನಾನು ಅದನ್ನು ಸ್ವೀಕರಿಸಿಕೊಂಡು ಗುನ್ನಾ ಸಂಖ್ಯೆ .69/2012 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿಯನ್ನು ರವಾನಿಸಿರುತ್ತೇನೆ. ಈಗ ನೋಡುತ್ತಿರುವ ನಿಪಿ– 1 ನಾನು ಪಡೆದ ದೂರು ಆಗಿದ್ದು ಅದರಲಿಲರುವ ಸಹಿ ನನ್ನದು , ಸಾಕ್ಷಿ ಗುರುತಿಸಿರುವ ಸಹಿಯನ್ನು ನಿಪಿ–1(ಬಿ ) ಎಂದು ಗುರುತಿಸಲಾಯಿತು. ಅದೇ ರೀತಿ ಈಗ ನೋಡುತ್ತಿರುವ ಪ್ರಥಮ ವರ್ತಮಾನ

ವರದಿಯಲ್ಲಿರುವ ಸಹಿ ನನ್ನದು . ಸಾಕ್ಷಿ ಗುರುತಿಸಿರುವ ಪ್ರಥಮ ವರ್ತಮಾನ ವರದಿ ಯನ್ನು ನಿಪಿ-68 ಎಂದು , ಸಾಕ್ಷಿಯ ಸಹಿಯನ್ನು ನಿಪಿ-68(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ-1 ರವರು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು , ಅವುಗಳನ್ನು ನಮ್ಮ ಠಾಣೆಯ ಕಚೇರಿಯಲ್ಲಿ ಮಧ್ಯಾಹ್ನ 3.15 ರಿಂದ 5.00 ಗಂಟೆವರೆಗೆ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆಯನ್ನು ಬರೆದು ಎಲ್ಲಾ ದಾಖಲೆಗಳನ್ನು ಒಂದು ಕಾಕಿ ಕವರ್ ನಲ್ಲಿ ಹಾಕಿ ನನ್ನ ಹಾಗು ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿ ವಶಕ್ಕೆ ಪಡೆದುಕೊಂಡಿರುತ್ತೇನೆ . ಈಗ ನೋಡುತ್ತಿರುವ ನಿಪಿ-2 ನಾನು ಬರೆದ ಪಂಚನಾಮೆ ಆಗಿದ್ದು ಅದರಲ್ಲಿರುವ ಸಹಿ ನನ್ನದು , ಸಾಕ್ಷಿ ಗುರುತಿಸಿರುವ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ನೋಡಿದರೆ ಗುರುತಿಸಬಲ್ಲೆ. ಈಗ ನೋಡುತ್ತಿರುವ ನಿಪಿ-3 ರಿಂದ ನಿಪಿ-35 ಸದರಿ ದಾಖಲೆಗಳು ಆಗಿರುತ್ತವೆ . ಅದೇ ದಿನ ಈ ಕೇಸಿನ ಸಾಕ್ಷಿದಾರರಾದ ಚಾಸಾ-2 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ .

ದಿಃ 05-08-2012 ರಂದು ತನಿಖೆಯನ್ನು ಮುಂದುವರೆಸಿ ಪಿರ್ಯಾದುದಾರರಿಗೆ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಲು ನೋಟಿಸ್ ನೀಡಿರುತ್ತೇನೆ . ಅದರಂತೆ ಚಾಸಾ-7 ರವರು ನಾನು ಕೇಳಿದ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಮದ್ಯಾಹ್ನ 4.00 ರಿಂದ 5.00 ಗಂಟೆವರೆಗೆ ಪಂಚನಾಮೆಯನ್ನು ಬರೆದು ಎಲ್ಲಾ ದಾಖಲೆಗಳನ್ನು ಒಂದು ಕಾಕಿ ಕವರ್ ನಲ್ಲಿ ಹಾಕಿ ನನ್ನ ಹಾಗು ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿ ವಶಕ್ಕೆ ಪಡೆದುಕೊಂಡಿರುತ್ತೇನೆ . ಈಗ ನೋಡುತ್ತಿರುವ ನಿಪಿ-36 ನಾನು ಬರೆದ ಪಂಚನಾಮೆ ಆಗಿದ್ದು ಅದರಲ್ಲಿರುವ ಸಹಿ ನನ್ನದು , ಸಾಕ್ಷಿ ಗುರುತಿಸಿರುವ ಸಹಿಯನ್ನು ನಿಪಿ-36(ಸಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ನೋಡಿದರೆ ಗುರುತಿಸಬಲ್ಲೆ. ಈಗ

ನೋಡುತ್ತಿರುವ ನಿಪಿ-37 ರಿಂದ ನಿಪಿ-44 ಸದರಿ ದಾಖಲೆಗಳು ಆಗಿರುತ್ತವೆ . ಅದೇ ದಿನ ಚಾಸಾ- 4 ಮತ್ತು ಚಾಸಾ-7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ . ದಿಃ 06-08-2012 ರಂದು 1 ನೇ ಆರೋಪಿತರು ವರ್ದಮಾನ ಸಹಕಾರ ಅರ್ಬನ್ ಕೋ-ಅಪರೇಟಿವ್ ಬ್ಯಾಂಕ್ , ಹುಬ್ಬಳ್ಳಿ ರವರ ಅಧಿಕಾರಿಗಳು ಬರೆದುಕೊಟ್ಟಿದ್ದಾರೆ ಎನ್ನಲಾದ ಪತ್ರವನ್ನು ದಿಃ 29-06-2009 ರಂದು ಉನೊಂದಣಾಧಿಕಾರಿಗಳು , ರಾಣೇಬೆನ್ನೂರು ರವರ ಕಚೇರಿಯಲ್ಲಿ ನೊಂದು ಮಾಡಿಸಿದ ಮೂಲ ಪ್ರತಿಯನ್ನು ಹಾಜರುಪಡಿಸಲು ಉಪನೊಂದಾಣಾಧಿಕಾರಿಗೆ ನೋಟಿಸ್ ನೀಡಿರುತ್ತೇನೆ. ಸದರಿ ನೋಟಿಸ್ ನ್ನು ದಿಃ 06-08-2012 ರಂದು ನೀಡಿರುತ್ತೇನೆ. ಈಗ ನೋಡುತ್ತಿರುವ ದಾಖಲೆ ಸದರಿ ನೋಟಿಸ್ ಪ್ರತಿಯಾಗಿದ್ದು ಸಾಕ್ಷಿ ಗುರುತಿಸಿರುವ ನೋಟಿಸ್ ನ್ನು ನಿಪಿ-69 ಎಂದು, ಸಹಿಯನ್ನು ನಿಪಿ-69(ಎ) ಎಂದುಜ ಗುರುತಿಸಲಾಯಿತು. ಅದೇ ದಿನ ಸಿಟಿ ಸರ್ವೇ ನಂ.4087 ರ ಮಾಲೀಕರಾದ 1 ನೇ ಆರೋಪಿತರಿಗೆ ತಹಶೀಲ್ದಾರರು , ರಾಣೇಬೆನ್ನೂರು ರವರ ಕಚೇರಿಯಲ್ಲಿ ದಿಃ 29-06-2009 ರಂದು ವರ್ದಮಾನ ಸಹಕಾರ ಅರ್ಬನ್ ಕೋ-ಅಪರೇಟಿವ್ ಬ್ಯಾಂಕ್ , ಹುಬ್ಬಳ್ಳಿ ರವರು ಬೋಜಾ ಕಡಿಮೆ ಮಾಡಲು ಬ್ಯಾಂಕ್ ಅಧಿಕಾರಿಗಳು ಕೊಟ್ಟ ಪತ್ರವನ್ನು ಹಾಜರುಪಡಿಸಿರುತ್ತಾರೆ . ಆ ಪತ್ರವನ್ನು ಹಾಜರುಪಡಿಸಲು ತಹಶೀಲ್ದಾರರು , ರಾಣೇಬೆನ್ನೂರು ರವರಿಗೆ ನೋಟಿಸ್ ಕೊಟ್ಟಿರುತ್ತೇನೆ . ಈಗ ನೋಡುತ್ತಿರುವ ದಾಖಲೆ ಸದರಿ ನೋಟಿಸ್ ಪ್ರತಿಯಾಗಿದ್ದು ಸಾಕ್ಷಿ ಗುರುತಿಸಿರುವ ನೋಟಿಸ್‌ನ್ನು ನಿಪಿ-70 ಎಂದು, ಸಹಿಯನ್ನು ನಿಪಿ-70(ಎ) ಎಂದುಜ ಗುರುತಿಸಲಾಯಿತು. ಅದೇ ರೀತಿ 08-08-2012 ರಂದು ಉಪನೊಂದಣಿಧಿಕಾರಿ ರವರು ಮೂಲ ಪ್ರತಿಯನ್ನು ಹಾಜರುಪಡಿಸದಿದ್ದ ಕಾರಣ ಮತ್ತೊಂದು ನೂಟಿಸ್ ಕೊಟ್ಟಿರುತ್ತೇನೆ. ಈಗ ನೋಡುತ್ತಿರುವ ದಾಖಲೆ ಸದರಿ ನೋಟಿಸ್ ಪ್ರತಿಯಾಗಿದ್ದು ಸಾಕ್ಷಿ ಗುರುತಿಸಿರುವ ನೋಟಿಸ್‌ನ್ನು

ನಿಪಿ-71 ಎಂದು, ಸಹಿಯನ್ನು ನಿಪಿ-71(ಎ) ಎಂದು ಗುರುತಿಸಲಾಯಿತು. ದಿಃ 10-08-2012 ರಂದು ಚಾಸಾ-10 ಮತ್ತು ಚಾಸಾ-11 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ .

**(ಹೆಚ್ಚಿನ ಸಾಕ್ಷಿ ವಿಚಾರಣೆಗಾಗಿ ಎಪಿಪಿ ರವರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ನನ್ನ ಸಮಕ್ಷಮ

sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಓ ಹೇ ಕೇ ಸರಿ ಇದೆ. ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.